# ಕನ್ನಡ ನಾಡಿನ ಖರ್ಜೂರ



ಬಯಲುಸೀಮೆ ಗೌರಿಬಿದನೂರಿನಲ್ಲಿ ಖರ್ಜೂರ ಬೆಳೆದಿರುವ ಕೃಷಿಕ ದಿವಾಕರ್ ಚಿನ್ನಪ್ಪ ಅವರ ತೋಟದಲ್ಲಿ ಈಚೆಗೆ ಕೊಯ್ಲು ಹಬ್ಬ ನಡೆಯಿತು. ಕರ್ನಾಟಕದ ಮೊತ್ತಮೊದಲ ಸಾವಯವ ಖರ್ಜೂರ ತೋಟದಲ್ಲಿ ನೂರಾರು ಮಂದಿ ಉತ್ಸಾಹದಿಂದ ಸೇರಿದ್ದರು.

■ ನಾಗೇಶ ಹೆಗಡೆ

ಆಗಸ್ಟ್ 6ರ ಭಾನುವಾರ ಬೆಂಗಳೂರಿನ ಅರ್ಧ ಲಕ್ಷ ಜನರ ಮಹಾಪ್ರವಾಹವೊಂದು ಲಾಲ್‌ಬಾಗ್‌ನ ಹೂ ಮೇಳವನ್ನು ನೋಡಹೊರಟಿತ್ತು. ಅದೇ ದಿನ, ಇದೇ ನಗರದ ಅರ್ಧ ಸಾವಿರ ಜನರ ಚಿಕ್ಕ ತೊರೆಯೊಂದು ನೂರು ಕಿಲೋಮೀಟರ್ ಆಚಿನ ಗೌರಿಬಿದನೂರಿನ ಖರ್ಜೂರದ ತೋಟವನ್ನು ಪ್ರವೇಶಿಸಿತ್ತು. ಅಲ್ಲಿ ತೊನೆದಾಡುವ ಹೊಂಬಣ್ಣದ ಫಲ ಗೊಂಚಲನ್ನು ಕಣ್ತುಂಬಿಕೊಳ್ಳುವ ಹಂಬಲ ಹಲವರಿಗೆ; ಕಚ್ಚಿ ರುಚಿ ನೋಡುವ ತವಕ ಇನ್ನು ಕೆಲವರಿಗೆ. ಗೋಟಡಿಕೆಗಳಂತೆ ಪ್ರತಿ ಮರದ ಕೆಳಗೆ ಹಾಸಿ ಬಿದ್ದಿರುವ ಹಳದಿ ಹಣ್ಣುಗಳನ್ನು ಬಾಚಿಕೊಳ್ಳುವ ಉತ್ಸಾಹ ಇನ್ನುಳಿದವರಿಗೆ.

‘ಡ್ರೋನ್ ಕ್ಯಾಮೆರಾ ತಂದಿಲ್ಲವಾ? ಮೇಲಿನಿಂದ ನೋಡಿದೆ ಹೆಂಗ್ ಕಾಣುತ್ತೊ?’

‘ಲೋ ಗುಗ್ಗು, ಗೂಗಲ್ ಮ್ಯಾಪ್‌ನಲ್ಲಿ ನೋಡೋ, ಎಲ್ಲ ಅಂಗೈಯಲ್ಲೇ ಇದೆ’.

ಆ ಹುಡುಗ ಅಂಗೈಯಲ್ಲಿ ಬಚ್ಚಿಟ್ಟುಕೊಂಡಿದ್ದ ಎರಡನೇ ಹಣ್ಣನ್ನು ಬಾಯಿಗಿಟ್ಟ. ‘ಸೇಬಿಗಿಂತ ತುಸು ಗಟ್ಟಿ ಕಣೋ! ಸಿಹಿ ಮಾತ್ರ ಇನ್ನೂ ಜಾಸ್ತಿ’ ಎನ್ನುತ್ತ ಇನ್ನೆರಡು ಹಣ್ಣುಗಳನ್ನು ಕಿಸೆಗೆ ಸೇರಿಸುತ್ತಿದ್ದ.

ಖರ್ಜೂರ ತೋಟದ ಯಜಮಾನ ದಿವಾಕರ್ ಚಿನ್ನಪ್ಪ ಕೈಯಲ್ಲಿ ಮೈಕ್ ಹಿಡಿದು ಹಬ್ಬದ ವಿಶೇಷಗಳ ಬಗ್ಗೆ ಹೇಳುತ್ತಿದ್ದರು. ‘ಬರೀ ಖರ್ಜೂರ ನೋಡಬೇಡಿ. ಇತ್ತ ರಾಮಫಲ ಇದೆ, ರೆಕ್ಕೆ ಅವರೆ ಇದೆ, ಬಟರ್ ಫ್ರೂಟ್ ಇದೆ. ಅದನ್ನೂ ನೋಡಿ. ಇದೀಗ ಗೋಪೂಜೆ ಇದೆ. ಆಮೇಲೆ ಬೀಜದುಂಡೆ ಕಾರ್ಯಕ್ರಮ ಇರ್ತದೆ; ಎತ್ತಿನ ಬಂಡಿ ಟ್ರಿಪ್ ಇದೆ. ಕೆಸರುಗದ್ದೆ ನಾಟಿ ಇದೆ, ಸಾವಯವ ಊಟ ಇದೆ...’ ಪಟ್ಟಿ ಕೊಡುತ್ತಿದ್ದರು.

## ಮರಳಿ ಮಣ್ಣಿಗೆ

ದಿವಾಕರರ ತೋಟದ ಹೆಸರು ‘ಮರಳಿ ಮಣ್ಣಿಗೆ’. ಬೆಂಗಳೂರಿನಲ್ಲಿ ಓದುತ್ತಿದ್ದ ಇವರಿಗೆ

↑ ಗೌರಿಬಿದನೂರಿನಲ್ಲಿನ ದಿವಾಕರ ಚಿನ್ನಪ್ಪ ಅವರ ತೋಟದಲ್ಲಿ ಖರ್ಜೂರ ಹಬ್ಬದ ಸಂಭ್ರಮ

‘ಮರಳಿ ಮಣ್ಣಿಗೆ’ ತೋಟದಲ್ಲಿ ತಾಜಾ ಖರ್ಜೂರ ಖರೀದಿ ಜೋರು ↓

